## ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರುಃ– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು , ಚಿತ್ರದುರ್ಗ ಜಿಲ್ಲೆ.

ಓಎಸ್ ಸಂಖ್ಯೆ: 23/2006

ದಿನಾಂಕಃ 4 ನೇ ಜೂನ್ –2026.

ವಾದಿಯರು ಃ ವಿಜಯಲಕ್ಷ್ಮಿ ಮತ್ತು ಇತರರು
(ಪ್ರತಿನಿಧಿ ಶ್ರೀ.ಹೆಚ್ ಆರ್ ಕೆ. , ವಕೀಲರು)

ವಿರುದ್ಧ

ಪ್ರತಿವಾದಿಯರು : ಹೆಚ್ ಚಂದ್ರಶೇಖರಯ್ಯ ಮತ್ತು ಇನ್ನೊಬ್ಬರು

(1 ನೇ ಪ್ರತಿವಾದಿ ಪರವಾಗಿ ಶ್ರೀ ಬಿ ಎಸ್ ., ವಕೀಲರು )
(2 ನೇ ಪ್ರತಿವಾದಿ ಪರವಾಗಿ ಶ್ರೀ ಜಿ ಆರ್ ಪಿ. , ವಕೀಲರು)

**ಮಧ್ಯಂತರ ಅರ್ಜಿ ಸಂಖ್ಯೆ–28 ರ ಪಕ್ಷಗಾರರು**

ಅರ್ಜಿದಾರರು / 10 ನೇ ಪ್ರತಿವಾದಿ ಃ ಉಮಾದೇವಿ

– ವಿರುದ್ಧ –

ವಾದಿಯರು/ಎದುರುದಾರರು ಃ ಹೆಚ್ ಚಂದ್ರಶೇಖರಯ್ಯ

| | | |
|---|---|---|
| 1 | ಯಾವ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ | ಕ್ರಮಾದೇಶ 23 ನಿಯಮ 1 –ಎ ಕ್ರಮಾದೇಶ 1 ನಿಯಮ 10 ಮತ್ತು ಸಹವರ್ತಿ ಕಲಂ 151 ರ ದಿವಾಣಿ ಪ್ರಕ್ರಿಯಾ ಸಂಹಿತೆ |
| 2 | ಯಾವ ಪರಿಹಾರಕ್ಕಾಗಿ | ವಾದಿಯಾಗಿ ಸ್ಥಾನಂತರಗೊಳ್ಳಲು |
| 3 | ಯಾವ ದಿನಾಂಕದಂದು ಅರ್ಜಿಯನ್ನು | 02.04.2026 |

SUJATHA SUVARNA B
Digitally signed by SUJATHA SUVARNA B
Date: 2026.06.16 10:57:46 +0530

| | | |
|---|---|---|
| | ಸಲ್ಲಿಸಲಾಗಿದೆಃ | |
| 4 | ಆರ್ಜಿಯ ವಿರುದ್ದ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕ | ಇಲ್ಲ |
| 5 | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ | 04.06.2026 |

**ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 1–ಎ ಕ್ರಮಾದೇಶ 1 ನಿಯಮ 10 ಮತ್ತು ಸಹವರ್ತಿ ಕಲಂ 151 ರನ್ವಯ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆಃ 28 ರ ಮೇಲಿನ ಆದೇಶ**

ಅರ್ಜಿದಾರರು / ಪ್ರತಿವಾದಿ–10 ಮಧ್ಯಂತರ ಅರ್ಜಿ ಸಂಖ್ಯೆಃ28 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 1–ಎ ಮತ್ತು ಸಹವರ್ತಿ ಕಲಂ 1 ನಿಯಮ 10 ಸಹವರ್ತಿ ಕಲಂ 151 ರನ್ವಯ ಅರ್ಜಿಯನ್ನು ಸಲ್ಲಿಸಿ, ಅವರನ್ನು ವಾದಿಯನ್ನಾಗಿ ಸ್ಥಾನಾಂತರ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಈ ದಾವೆಯಲ್ಲಿ ತಿದ್ದುಪಡಿ ವಾದ ಪತ್ರವನ್ನು ಸಲ್ಲಿಸಲು ನಿಗದಿ ಪಡಿಸಿದ ದಿನಾಂಕದಂದು 10 ನೇ ಪ್ರತಿವಾದಿಯವರು ಸಲ್ಲಿಸಿರುತ್ತಾರೆ.

2. ಅರ್ಜಿಗೆ ಪೂರಕವಾಗಿ 10 ನೇ ಪ್ರತಿವಾದಿಯವರು ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಪ್ರಮಾಣ ಪತ್ರದ ಸಾರಾಂಶ ಈ ಕೆಳಗಿನಂತೆ ಇರುತ್ತದೆಃ

ವಾದಿಯು ಪ್ರತಿವಾದಿಯವರ ವಿರುದ್ಧ ವಿಭಜನೆಯನ್ನು ಕೋರಿ ದಾವೆ ಸಲ್ಲಿಸಿದ್ದು ಸಮನ್ಸ್ ಜಾರಿಯಾದ ನಂತರ ಅವರು ನ್ಯಾಯಾಲಯಕ್ಕೆ ಹಾಜರಾಗಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 6(ಎ) ರಡಿಯಲ್ಲಿ ಲಿಖಿತ ಹೇಳಿಕೆ ಮತ್ತು ಎದುರು ಕ್ಲೇಮನ್ನು ಕೋರಿ ದಾವಾ ಆಸ್ತಿಯಲ್ಲಿ ಅವರಿಗೆ 1/3 ನೇ ಅಂಶ ಹಂಚಿಕೆ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ದಿಃ 23.04.2014 ರಂದು ವಾದಿಯು ಮೆಮೋ ಸಲ್ಲಿಸಿ ದಾವೆಯನ್ನು ಹಿಂಪಡೆದುಕೊಳ್ಳಲು ಕೋರಿಕೊಂಡಿದ್ದು 10 ನೇ ಪ್ರತಿವಾದಿಯು ತಕರಾರನ್ನು ಸಲ್ಲಿಸಿದ್ದರು ಕೂಡ

ನ್ಯಾಯಾಲಯವು ದಾವೆಯನ್ನು ವಜಾಗೊಳಿಸಿದ್ದು ಆ ಆದೇಶದ ವಿರುದ್ಧ ಅವರು ಗೌರವಾನ್ವಿತ ಕರ್ನಾಟಕೆ ಉಚ್ಚ ನ್ಯಾಯಾಲಯದಲ್ಲಿ ಸಿವಿಲ್ ರಿವಿಷನ್ ಪಿಟಿಷನ್ ನಂ.289/2015 ಸಲ್ಲಿಸಿದ್ದು ಗೌ.ಉಚ್ಚ ನ್ಯಾಯಾಲಯವು ದಿಃ24.04.2014 ರ ಆದೇಶವನ್ನು ರದ್ದುಗೊಳಿಸಿ ಎದುರು ಕ್ಲೇವನ್ನು ಪರಿಗಣಿಸಿ ವಿಚಾರಣೆಯನ್ನು ಮುಂದುವರೆಸಲು ನ್ಯಾಯಾಲಯಕ್ಕೆ ನಿರ್ದೇಶವನ್ನು ನೀಡಿದ್ದು ಈ ನ್ಯಾಯಾಲಯವು 9 ನೇ ಪ್ರತಿವಾದಿಗೆ ನೋಟೀಸನ್ನು ಕಳುಹಿಸಿದಾಗ ಅವರು ಮೃತರಾಗಿರುತ್ತಾರೆಂದು ನೋಟೀಸು ಹಿಂದಿರುಗಿ ಬಂದಿರುತ್ತದೆ.

9 ನೇ ಪ್ರತಿವಾದಿಯವರು ಜೀವಿತಾವಧಿಯಲ್ಲಿ ತಮ್ಮ ಪುತ್ರಿ ಶ್ರೀಮತಿ ಎಂ.ಎ ರಾಗಿಣಿ ದೇವಿ ಇವರ ಪರವಾಗಿ ದಾನ ಪತ್ರ ಮಾಡಿರುತ್ತಾರೆಂದು ಅವರಿಗೆ ತಿಳಿದುಬಂದಿದ್ದು ತದನಂತರ ಅವರು ಎಂ.ಎ ರಾಗಿಣಿದೇವಿ ಇವರ ವಿರುದ್ಧ ದಾವೆಯನ್ನು ಮುಂದುವರೆಸಲು ಅನುಮತಿಯನ್ನು ಕೋರಿ ಅರ್ಜಿ ಸಲ್ಲಿಸಿದ್ದು ಆ ಅರ್ಜಿಯು ಪುರಸ್ಕೃತವಾಗಿದ್ದು ಆದರೇ ನ್ಯಾಯಾಲಯವು ಅವರ ವಕೀಲರಿಗೆ ದಾವಾ ಪತ್ರವನ್ನು ತಿದ್ದುಪಡಿ ಮಾಡಲು ಅನುಮತಿ ಕೋರಿದ್ದು ಆದಾಗಿಯು ದಿಃ21.02.2026 ರ ಆದೇಶದಂತೆ ದಾವೆಯನ್ನು ತಿದ್ದುಪಡಿ ಮಾಡಲು ನ್ಯಾಯಾಲಯವು ಅವಕಾಶವನ್ನು ನೀಡಿಲ್ಲ. ಅರ್ಜಿಯನ್ನು ಪುರಸ್ಕರಿಸಿದ ನಂತರ ದಾವೆಯನ್ನು ತಿದ್ದುಪಡಿ ಮಾಡುವ ಸಂಪೂರ್ಣ ಹಕ್ಕು ಅವರಿಗೆ ಇದೆ ಆದ್ದರಿಂದ ತಾಂತ್ರಿಕ ಆಕ್ಷೇಪಣೆಯನ್ನು ತಪ್ಪಿ ಸುವ ಉದ್ದೇಶದಿಂದ ಅವರನ್ನು ವಾದಿಯನ್ನಾಗಿ ಸ್ಥಾನಾಂತರ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

3. ವಾದಿಯಾಗಲೀ ಉಳಿದ ಪ್ರತಿವಾದಿಯವರಾಗಲೀ ಈ ಅರ್ಜಿಗೆ ಯಾವುದೇ ರೀತಿಯಾದಂತಹ ತಕರಾರನ್ನು ಸಲ್ಲಿಸಿರುವುದಿಲ್ಲ.

4. ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ–

1. ಅರ್ಜಿದಾರರು ತಮ್ಮನ್ನು ವಾದಿಯನ್ನಾಗಿ ಸ್ಥಾನಾಂತರಗೊಳಿಸುವುದು ಅವಶ್ಯಕತೆ ಇದೆಯೆಂದು ಸಕಾರಣ ನೀಡುತ್ತಾರೆಯೇ?

2. ಯಾವ ಆದೇಶ?

6. ನ್ಯಾಯಾಲಯದ ಮುಂದಿರುವ ಅಂಶಗಳನ್ನು ಹಾಗೂ ದಾಖಲೆಗಳನ್ನು ಹಾಗೂ ಉಭಯ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿದೆಃ-

ಅಂಶ-1ಃ ನಕಾರಾತ್ಮಕವಾಗಿ,
ಅಂಶ-2ಃ ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದದಂತೆ

**ಕಾ ರ ಣ ಗಳು**

7. **ಅಂಶ-1** ಃ ಅರ್ಜಿದಾರರು/10 ನೇ ಪ್ರತಿವಾದಿಯು ಈ ಅರ್ಜಿಯನ್ನು ತಮ್ಮನ್ನು ವಾದಿಯನ್ನಾಗಿ ಸ್ಥಾನಾಂತರ ಗೊಳಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ ಕಡತವನ್ನು ಗಮನಿಸಿದಾಗ ಈ ನ್ಯಾಯಾಲಯವು ದಿಃ23.04.2015 ರಂದು ವಾದಿಯ ದಾವೆಯನ್ನು ವಜಾಗೊಳಿಸಿದ್ದು ಆ ಆದೇಶದ ವಿರುದ್ಧ 10 ನೇ ಪ್ರತಿವಾದಿಯು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಸಿವಿಲ್ ರಿವಿಷನ್ ಅರ್ಜಿಯನ್ನು ಸಲ್ಲಿಸಿದ್ದು ಆ ಅರ್ಜಿಯು ಪುರಸ್ಕರಿಸಲ್ಪಟ್ಟಿದ್ದು ಎದುರು ಕ್ಲೇಮು ದಾವಾ ಪತ್ರದ ಸ್ವರೂಪವಾಗಿರುವುದರಿಂದ ನ್ಯಾಯಾಲಯದ ಪ್ರಕರಣದ ವಾಸ್ತವಾಂಶಗಳನ್ನು ಹಾಗೂ ಸಂಧರ್ಭವನ್ನು ಪರಿಗಣಿಸಿ ಆ ಎದುರು ಕ್ಲೇಮನ್ನು ಮುಂದುವರೆಸಬಹುದಾದ ಕಾನೂನು ಬದ್ಧತೆಯನ್ನು ಕಾನೂನಿಗೆ ಅನುಗುಣವಾಗಿ ಪರಿಗಣಿಸಬೇಕೆಂದು ಆದೇಶ ನೀಡಿರುತ್ತದೆ. ತದನಂತರ ಈ ನ್ಯಾಯಾಲಯಾವು ವಾದಿಗೆ ನೋಟೀಸ್ ಕಳುಹಿಸಿದ ನಂತರ ವಾದಿಯು 02.01.2024 ರಂದು ನ್ಯಾಯಾಲಯಕ್ಕೆ

ಹಾಜರಾಗಿದ್ದು ಹಾಗೂ ಅವರ ಪರ ವಕೀಲರು ಕೂಡ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ನಂತರ ದಾವೆಯನ್ನು ಮುಂದುವರೆಸಿರುವುದಿಲ್ಲ, 10 ನೇ ಪ್ರತಿವಾದಿಯು ಕ್ರಮಾದೇಶ 22 ನಿಯಮ 10 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಈ ನ್ಯಾಯಾಲಯವು ದಿಃ22.01.2020 ರಂದು ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ತಿದ್ದುಪಡಿಗೆ ದಿಃ04.03.2026 ಕ್ಕೆ ನಿಗದಿ ಪಡಿಸಿರುತ್ತದೆ

8. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದಿಃ04.03.2026 ರಂದು ಪ್ರತಿವಾದಿ 10 ರ ಪರ ವಕೀಲರು ಹಾಜರಾಗಿರುತ್ತಾರೆ ಎಂದು ಅವರು ವಾದ ಪತ್ರವನ್ನು ತಿದ್ದುಪಡಿ ಮಾಡಲು ತಯಾರಿದ್ದಾರೆ ಎಂದು ನ್ಯಾಯಾಲಯವು ಅವಕಾಶ ನೀಡಿಲ್ಲವೆಂದು ವಾದವನ್ನು ಮಂಡಿಸಿದ್ದು ವಾದ ಪತ್ರವನ್ನು ವಾದಿ ಸಲ್ಲಿಸಿದ್ದಾಗಿದ್ದು ಅರ್ಜಿದಾರರು ಪ್ರತಿವಾದಿಯವರಾಗಿರುತ್ತಾರೆ ವಾದಿ ಆಗಿರುವುದಿಲ್ಲ , ಆದ್ದರಿಂದ ಅವರಿಗೆ ವಾದ ಪತ್ರವನ್ನು ತಿದ್ದುಪಡಿ ಮಾಡುವಂತಹ ಅವಕಾಶ ಇರುವುದಿಲ್ಲ ಆದ್ದರಿಂದ ಈ ನ್ಯಾಯಾಲಯವು ಈ ನ್ಯಾಯಾಲಯದ ಶಿರಸ್ತೇದಾರರಿಗೆ ಮಧ್ಯಂತರ ಅರ್ಜಿಯ ಆದೇಶದಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಲು ಆದೇಶ ಮಾಡಿದ್ದು ನ್ಯಾಯಾಲಯದ ಆದೇಶದಂತೆ ಶಿರಸ್ತೇದಾರರು ವಾದ ಪತ್ರದಲ್ಲಿ 11 ನೇ ಪ್ರತಿವಾದಿಯನ್ನು ಸೇರಿಸಿ ತಿದ್ದುಪಡಿ ಮಾಡಿರುತ್ತಾರೆ .

9. 10 ನೇ ಪ್ರತಿವಾದಿಯವರು ಎದುರು ಕ್ಲೇಮನ್ನು ಕೋರುತ್ತಿದ್ದು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-VIII ನಿಯಮ 6 ಎ (4) ರ ಪ್ರಕಾರ ಎದುರು ಕ್ಲೇಮನ್ನು ವಾದ ಪತ್ರವೆಂದು ಪರಿಗಣಿಸತಕ್ಕದ್ದು ಎಂದು ಅದು ವಾದ ಪತ್ರಗಳಿಗೆ ಅನ್ವಯಿಸುವ ನಿಯಮಗಳಿಂದ ನಿಯಂತ್ರಿತವಾಗತಕ್ಕದ್ದು ಎಂದು ಉಲ್ಲೇಖವಿರುತ್ತದೆ . ಆದ್ದರಿಂದ 10 ನೇ ಪ್ರತಿವಾದಿಗೆ ಕೇವಲ ತನ್ನ ಎದುರು ಕ್ಲೇಮನ್ನು ತಿದ್ದುಪಡಿ ಮಾಡುವಂತಹ ಅವಕಾಶ ಮಾತ್ರ ಇರುತ್ತದೆ .

10. 10 ನೇ ಪ್ರತಿವಾದಿಯು ತನ್ನನ್ನು ವಾದಿಯನ್ನಾಗಿ ಸ್ಥಾನಪಲ್ಲಟ ಮಾಡಬೇಕೆಂದು ಕೋರಿಕೊಂಡಿದ್ದು ಗೌರವಾನ್ವಿತ ಉಚ್ಚ ನ್ಯಾಯಾಲಯ ಸಿವಿಲ್ ರಿವಿಷನ್ ಪಿಟಿಷನ್

ನಂ.289/2015 ರಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯವು ಎದುರು ಕ್ಲೇಮು ದಾವಾ ಪತ್ರದ ಸ್ವರೂಪವಾಗಿರುವುದರಿಂದ ಪ್ರಕರಣದ ವಾಸ್ತವಾಂಶಗಳು ಮತ್ತು ಸಂದರ್ಭಗಳನ್ನು ಪರಿಗಣಿಸಿ ಎದುರು ಕ್ಲೇಮಿನ ಸಮರ್ಥತೆಯನ್ನು ಪರಿಶೀಲಿಸಬೇಕೆಂದು ಆದೇಶ ಮಾಡಿರುತ್ತಾರೆ . 10 ನೇ ಪ್ರತಿವಾದಿಯವರು ಎದುರು ಕ್ಲೇಮನ್ನು ಕೋರಿರುವುದರಿಂದ ಎದುರು ಕ್ಲೇಮು ವಾದ ಪತ್ರವೆಂದೇ ಪರಿಗಣಿಸಿರುವುದರಿಂದ ಅವರನ್ನು ವಾದಿಯನ್ನಾಗಿ ಸ್ಥಾನ ಪಲ್ಲಟ ಗೊಳಿಸುವಂತಹ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ ಮೇಲೆ ವಿವರಿಸಿದ ಕಾರಣಗಳಿಂದ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ .

11. ಅಂಶ 2 ಃ ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು ಮಧ್ಯಂತರ ಅರ್ಜಿ–28 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 23 ನಿಯಮ 1–ಎ ಕ್ರಮಾದೇಶ 1 ನಿಯಮ 10 ಮತ್ತು ಸಹವರ್ತಿ ಕಲಂ 151 ಅಡಿಯಲ್ಲಿ ಸಲ್ಲಿಸಿದಂತಹ ಅರ್ಜಿಯನ್ನು ವಜಾಗೊಳಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ, ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 4 ನೇ ಜೂನ್ –2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು .

SUJATHA SUVARNA B

Digitally signed by SUJATHA SUVARNA B
Date: 2026.06.16 10:57:57 +0530